ಎಂ.ಕೆ. ರವಿಕಾಂತ, ತುಮಕೂರು
*ಶಿಕ್ಷೆಯಾಗಿರುವ ವ್ಯಕ್ತಿಗೆ ಗಲ್ಲಿಗೇರಿಸುವ ಸಮಯದಲ್ಲಿ ವೈದ್ಯರು ಆರೋಗ್ಯ ತಪಾಸಣೆ ನಡೆಸುವುದು ಏಕೆ?*



ಊನವಾಗಿರುವುದು ಬಲಿಗೆ ಅರ್ಹವಲ್ಲ ಎಂಬುದು ನಮ್ಮ ಸಂಪ್ರದಾಯ.

ರಮೇಶ ಜ. ಬೊಂಗಾಳೆ, ಬೈಲಹೊಂಗಲ
*ಸೃಷ್ಟಿ ಮಾಡಿದ ಬ್ರಹ್ಮನಿಗೆ ನಾಲ್ಕು ಮುಖಗಳು. ಆದರೆ ರಾವಣನಿಗೇಕೆ ಹತ್ತು ಮುಖಗಳು ಸಾರ್?*
ಯಾರು ಹೆಚ್ಚು ತಲೆ ಹೋಗುವಂತಹ ಕೆಲಸ ಮಾಡುತ್ತಾರೋ ಅವರಿಗೆ ಹೆಚ್ಚು ತಲೆಗಳು ಇರಬೇಕಾದುದು ಅವಶ್ಯ.

ನಳಿನಿ ಆರ್. ಮಾಗಲ್, ಸಕಲೇಶಪುರ
*ಸಪ್ತಪದಿ ತುಳಿದು ಮದುವೆಯಾದರೂ, ಪ್ರೇಮವಿವಾಹವಾದರೂ, ವಿಚ್ಛೇದನಗಳು ಹೆಚ್ಚುತ್ತಿವೆಯಲ್ಲ, ಇವಕ್ಕೆ ಪರಿಹಾರವೇನು?*
ಎರಡು 'ನಾನು'ಗಳು ಮದುವೆಯಾದ ನಂತರವೂ 'ನಾನು' ಆಗಿಯೇ ಮುಂದುವರಿಯದೆ 'ನಾವು' ಆಗುವುದು.

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಹುಣ್ಣಿಮೆ ಚಂದ್ರನನ್ನು ಕಂಡ ಸಾಗರ ಉಬ್ಬುತ್ತದಲ್ಲಾ, ಯಾಕೆ?*



ತನ್ನಲ್ಲಡಗಿರುವ ಸಂಪತ್ತನ್ನು ಕಾಣಲೆಂದು ಸುಡುಸೂರ್ಯನಿಗಿಂತ ಎಲ್‌ಇಡಿಯ ತಂಪಿನ ಚಂದ್ರನನ್ನು ಹಿಡಿಯಲು ಉಬ್ಬಿ ಚಿಮ್ಮುವುದಂತೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ
*ನದಿಗಳೆಲ್ಲ ಹೆಣ್ಣಾದರೆ, ಸಮುದ್ರವನ್ನು ಏನೆಂದು ಕರೆಯಬಹುದು?*
ಅಂತಃಪುರ ಅಥವಾ ಲೇಡೀಸ್ ಕ್ಲಬ್.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಕಾಸಿದ ಕಬ್ಬಿಣಕ್ಕೂ, ಪ್ರಾಯದ ಹೆಣ್ಣಿಗೂ ಏನು ವ್ಯತ್ಯಾಸ?*
ಕಾಸಿದ ಕಬ್ಬಿಣ ತಾನೇ ಬೆಂಡಾಗುತ್ತದೆ; ಪ್ರಾಯದ ಹುಡುಗಿಗೆ ಎಲ್ಲ ವಯಸ್ಸಿನ ಗಂಡುಗಳೂ ಬೆಂಡಾಗುತ್ತಾರೆ.

ರಮೇಶ್, ಹನುಮನಾಳು
*ಹಿಂದಿನದು ಸಂಸ್ಕೃತಿ. ಇಂದಿನದು...?*
ಚುನಾವಣಾ ಸಮಯದಲ್ಲಂತೂ ಸ್ಲಂಸ್ಕೃತಿ.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ
*ವೈಫಿಗೂ, ನೈಫಿಗೂ ಇರುವ ಒಂದು ಸಾಮ್ಯತೆ, ಒಂದು ವ್ಯತ್ಯಾಸ ತಿಳಿಸಬಲ್ಲಿರಾ?*
ಎರಡೂ ಚುರುಕೇ; ತರಕಾರಿ ಕತ್ತರಿಸಲು ನೈಫು; ತಕರಾರಿ ತತ್ತರಿಸಲು ವೈಫು.

ಶಿವಮೊಗ್ಗ ರಮೇಶ್, ಮೈಸೂರು
*ಈಗೀಗ ನಟನಟಿಯರು ಎರಡನೇ ಸಂಬಂಧವನ್ನೇ ಬಯಸುವುದು ಹೆಚ್ಚಾಗಿರಲು ಕಾರಣವೇನು?*
ಸ್ವಚ್ಛ ಭಾರತ್ ಅಭಿಯಾನದ 'ಹಳೆಯದನ್ನು ರೀಸೈಕಲ್ ಮಾಡಿ' ಎಂಬ ನುಡಿಯ ಪಾಲನೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ನಿಮ್ಮ ಪಾಲಿನ ಹನುಮಂತ ಯಾರು?*
ನಿಮ್ಮ ಪ್ರಶ್ನೆಗಳೆಂಬ ಚೂಡಾಮಣಿಯನ್ನು ತಂದುಕೊಡುವ ಕೊರಿಯರ್ ಬಾಯ್.

ಅಪರಾಜಿತೆ, ಬೆಂಗಳೂರು
*ಇಲ್ಲಿಯ ತನಕ ನಿಮಗೆ ಎಷ್ಟು ಪ್ರೇಮ ಪತ್ರಗಳು ಬಂದಿವೆ?*
ಹತ್ತು ಸಾವಿರಕ್ಕೂ ಹೆಚ್ಚು; ಎಲ್ಲವೂ ಪ್ರೇಮಪತ್ರಗಳೇ ದೇಶಪ್ರೇಮ, ಹಾಸ್ಯಪ್ರೇಮ, ಭಾಷಾಪ್ರೇಮ....

ಚಿನ್ಮಯ ಎಸ್. ಬಿರಾದಾರ್, ಭಾಲ್ಕಿ
*ತಂದೆತಾಯಿಯನ್ನು ದೂರವಿರಿಸುವ ಮಕ್ಕಳು, ಗಂಡನನ್ನು ದೂರವಿಡುವ ಹೆಂಡತಿ ಮನುಷ್ಯರೇ?*
ಮಾನೀಟರ್ ಅದೇ; ಹಾರ್ಡ್‌ಡಿಸ್ಕ್ ಕರಪ್ಟ್ ಆಗಿರುತ್ತದೆ. ಸ್ವಾರ್ಥದ ವೈರಸ್ ಸೇರಿದರೆ ಮಮತೆಯ ಹಾರ್ಡ್‌ಡಿಸ್ಕ್ ಢಮಾರ್.

ಬೆಳ್ಳಾವೆ, ಬೆಂಗಳೂರು
*ನಮ್ಮ ಪ್ರಶ್ನೆಗಳಿಗೆ ಉತ್ತರಿಸಲು ನೀವು ನಿಮ್ಮಾಕೆಯ ಸಲಹೆ ಕೇಳುತ್ತೀರಂತೆ?*
ನಿಜ. ಹೆಂಡತಿಯರು ಹೇಳಿದ ಪ್ರಶ್ನೆಗಳನ್ನು ಗಂಡಂದಿರು ಬರೆದು ಕಳಿಸಿದಾಗಲೆಲ್ಲ ಹಾಗೆ ಮಾಡುತ್ತೇನೆ.

## ಬಹುಮಾನಿತ ಪ್ರಶ್ನೆ

ಪಿ.ಎಸ್. ಶ್ರೀವತ್ಸ, ಬೆಂಗಳೂರು
ಸೆಲ್ಫಿ; ಇದರ ನಿಜವಾದ ಅರ್ಥ?
ಫೋಟೋ ತೆಗೆಯಕ್ಕೆ ಸಹ ಒಬ್ಬ ಸ್ನೇಹಿತನಿಲ್ಲವೆಂದು.

ಬಿ. ಶಿವಲಿಂಗೇಗೌಡ, ಬೇವಿನಹಳ್ಳಿ
*ನದಿ ತೀರದಲ್ಲಿ ಮನೆ ಮಾಡಿದರೆ ಮೊಸಳೆಗಳ ಸ್ನೇಹ ಮಾಡಬೇಕು. ವಿಧಾನಸೌಧದ ಪಕ್ಕ ವಾಸಿಸಿದರೆ...?*
ನರಿ, ತೋಳ, ಗೂಬೆ, ಊಸರವಳ್ಳಿ, ಬಿಳಿಯಾನೆ, ಕತ್ತೆ, ಮುಂತಾದವುಗಳ ದ್ವೇಷ ಕಟ್ಟಿಕೊಳ್ಳದಂತಿರಬೇಕು.

ವಿ. ಹಮೀದ್, ವಿಟ್ಲ
*ಪ್ರೇಯಸಿಯು ತನ್ನ ಹಿಂದಿನ ಪ್ರಿಯತಮನನ್ನು ಹೊಗಳುತ್ತಿದ್ದಾಳಲ್ಲಾ, ಏನ್ಮಾಡಲಿ ಗುರೂ?*
ನೀವೂ ನಿಮ್ಮ ಹಿಂದಿನ ಪ್ರೇಯಸಿಯನ್ನು ಹೊಗಳಿ; ಮರುದಿನದಿಂದ ಹಣ, ಸಮಯ ಉಳಿತಾಯವಾದೀತು.

ಮಂಜುಳಾ ವೆಂಕಟೇಶಯ್ಯ, ಗದಗ
*ಬ್ರಹ್ಮಚಾರಿ ದೇವರುಗಳಾದ ಹನುಮಂತ, ಗಣೇಶರನ್ನು ಮಹಿಳೆಯರೇ ಹೆಚ್ಚು ಪೂಜಿಸುತ್ತಾರಲ್ಲ, ಏಕೆ?*



ಹನುಮನನ್ನು ಏಯ್ಟ್ ಪ್ಯಾಕ್ಸ್ ಬಾಡಿ, ಸೇವಾಮನೋಭಾವಕ್ಕೆ; ಗಣೇಶನನ್ನು ದೇವತೆಗಳಿಗೂ ಬಾಸ್ ಆದುದರಿಂದ.

ಎಚ್.ಆರ್. ದೇಸಾಯಿ, ರಾಯಚೂರು
ಮನುಷ್ಯ ಕೊನೆಗೆ ಯಾವುದರಲ್ಲಿ 'ಸಂತೋಷ' ಎಂಬ ಪದಕ್ಕೆ ಅರ್ಥ ಕಂಡುಕೊಂಡ?
ಪ್ರೊಫೆಸರ್ ಜಿ. ವೆಂಕಟಸುಬ್ಬಯ್ಯನವರ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನ ಎಂಟನೆಯ ಸಂಪುಟದಲ್ಲಿ.

ಪಿ.ಜೆ. ರಾಘವೇಂದ್ರ, ಮೈಸೂರು
ಗಂಡುಮಕ್ಕಳಾದರೆ ಚಡ್ಡಿ ದೋಸ್ತ್ ಅಂತೀವಿ; ಹೆಣ್ಣುಮಕ್ಕಳಾದರೆ?
ಫ್ರಾಕ್ ಫ್ರೆಂಡ್ಸ್.

■ ರಾಮ್